ನಫೆಡ್ ಪ್ರಾರಂಭವಾಗಿ ತಿಂಗಳು ಕಳೆದರೂ ಜಮಾವಣೆಯಾಗದ ಹಣ

ಹಗರಣದಲ್ಲಿ ತಿಪಟೂರು ನಫೆಡ್ ಕೇಂದ್ರ

ತಿಪಟೂರು: ಕೊಬ್ಬರಿ ಖರೀದಿಯ ನಫೆಡ್ ಪ್ರಾರಂಭವಾಗಿ ತಿಂಗಳಾದರೂ ರೈತರ ಖಾತೆಗೆ ಹಣ ಜಮಾವಣೆಗೊಳ್ಳದೇ ರೈತರು ಕಂಗಾಲಾಗಿದ್ದಾರೆ.

ಕೊರೋನಾ ಲಾಕ್‌ಡೌನ್‌ನಿಂದಾಗಿ ಮಾತಾಳ್ಳೆ ಸೇರಿದ್ದ ಕೊಬ್ಬರಿಗೆ ರೈತರ ಅವಿರತ ಹೋರಾಟದ ಫಲವಾಗಿ ತಡದ ನಫೆಡ್ ಕೇಂದ್ರದಿಂದಲೂ ತೊಂದರೆಗೆ ಒಳಗಾಗಿದ್ದಾರೆ. ನಫೆಡ್ ಕೇಂದ್ರ ಪ್ರಾರಂಭವಾಗಿ ತಿಂಗಳು ಕಳೆದಿದ್ದರೂ ರೈತರ ಖಾತೆಗೆ ಹಣ ಜಮಾವಣೆಗೊಂಡಿಲ್ಲ. ನಫೆಡ್ ಕಾರ್ಯಕ್ಕೂ ಮುಂಚಿತವಾಗಿಯೇ ಫ್ರೂಟ್ ಸಾಫ್ಟ್‌ವೇರ್ ನಲ್ಲಿ ರೈತರ ಸಂಪೂರ್ಣ ಮಾಹಿತಿ ಯನ್ನು ತೆಗೆದುಕೊಂಡು ದಿನಾಂಕ ನಿಗದಿ ಮಾಡಿ ಕೊಬ್ಬರಿ ಖರೀದಿಸುತ್ತಾರೆ. ನಫೆಡ್ ಗ್ರೆಡ್‌ಸೈಸ್ ನಲ್ಲಿ ಕೊಬ್ಬರಿ ಬಿಟ್ಟು 3 ದಿನಗಳ ಒಳಗಾಗಿ ರೈತರ ಖಾತೆಗೆ ಹಣ ಜಮಾವಣೆಯಾಗಬೇಕೆಂಬುದನ್ನು ಸ್ಪಷ್ಟವಾಗಿ ನಮೂದಿಸಿದೆ. ಆದರೆ ಸ್ಥಳೀಯ ಅಧಿಕಾರಿಗಳು ಹಣ ವರ್ಗಾವಣೆಯ ವಿಚಾರ ಕರ್ನಾಟಕ ಕೋ ಆಪರೇಟಿವ್ ಮಾರ್ಕೆಟ್ ಫೆಡೆರೇಷನ್ (ಕೆಎಸ್‌ಸಿಎಂಎಫ್) ಮುಖಾಂತರ ಆಗಬೇಕು ಎನ್ನುತ್ತಾರೆ. ಅಲ್ಲಿನ ಅಧಿಕಾರಿಗಳಿಗೆ ರೈತರು ಕರೆ ಮಾಡಿ ಮಾಹಿತಿ ಪಡೆಯಲು ಮುಂದಾದರೆ ಸರ್ಕಾರದಲ್ಲಿ ಹಣವಿಲ್ಲ ಅದ್ದರಿಂದ ಸದ್ಯಕ್ಕೆ ಹಣ ವರ್ಗಾವಣೆ ಸಾಧ್ಯವಿಲ್ಲ ಎಂಬ ಉತ್ತರವನ್ನು ನೀಡುತ್ತಾರೆ. ಆದರೆ ನಫೆಡ್ ಪ್ರಾರಂಭಕ್ಕೂ ಮುಂಚಿತವಾಗಿ ಇಂತಿಷ್ಟು ಹಣವನ್ನು ನಿಗಧಿ ಮಾಡಿಯೇ ಅನುಮತಿಯನ್ನು ನೀಡಿರುತ್ತಾರೆ ಎಂಬುದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ.

ಅದ್ದರಿಂದ ಸ್ಥಳೀಯ ರೈತರು ಕರ್ನಾಟಕ ಕೋ ಆಪರೇಟಿವ್ ಮಾರ್ಕೆಟ್ ಫೆಡೆರೇಷನ್ (ಕೆಎಸ್‌ಸಿಎಂಎಫ್) ವಿರುದ್ದ ದೂರು ದಾಖಲಿಸಲು ಸಹ ಚಿಂತನೆಯನ್ನು ನಡೆಸಿದ್ದಾರೆ.

ತಿಪಟೂರಿನ ನಫೆಡ್ ಖರೀದಿ ಕೇಂದ್ರದ ಹೊರಾಂಗಣ ಚಿತ್ರ.

> ನಫೆಡ್ ಕೇಂದ್ರಕ್ಕೆ 16 ಕ್ವಿಂಟಾಲ್ ಕೊಬ್ಬರಿ ತಂದು ಬಿಟ್ಟು 20 ದಿನಗಳು ಕಳೆದರೂ ಇಲ್ಲಿಯವರೆವಿಗೂ ಖಾತೆಗೆ ಹಣ ಜಮಾವಣೆ ಆಗಿಲ್ಲ. ಅಧಿಕಾರಿಗಳನ್ನು ಪ್ರಶ್ನಿಸಿದರೆ ಸಂಬಂಧವಿಲ್ಲದಂತೆ ಉತ್ತರ ನೀಡುತ್ತಿದ್ದಾರೆ.
> ■ ನಾಗೇಶ್, ಬಿಳಿಗೆರೆ ಪಾಳ್ಯ, ರೈತ

> ನಫೆಡ್ ಕೇಂದ್ರದಲ್ಲಿ ಬೇಲಿಯೊಂದಕ್ಕೆ ಸೂರು ರೂಪಾಯಿ ನೀಡಿದರೆ ಯಾವುದೇ ಪರೀಕ್ಷೆಗೂ ಒಳಪಡಿಸದೇ ಇಲ್ಲಿನ ಗ್ರೇಡಿಂಗ್ ಅಧಿಕಾರಿ ಕೊಬ್ಬರಿ ಹಾಕಿಕೊಳ್ಳುತ್ತಾರೆ. ನಿಯಮಗಳ ಪ್ರಕಾರ ಮಾತನಾಡಿದರೆ ಕೊಬ್ಬರಿ ಹಸಿ ಇದೆ ತೆಗೆದುಕೊಳ್ಳುವುದಿಲ್ಲ ಎಂದು ವಾಪಸ್ಸು ಕಳುಹಿಸುತ್ತಾರೆ ಎಂದು ಆರೋಪಿಸಿದ್ದಾರೆ.
> ■ ಹೆಸರು ಹೇಳ ಬಯಸದ ರೈತ

ಹಗರಣದ ಆರೋಪ

ನಫೆಡ್ ಕೇಂದ್ರದಲ್ಲಿ ರೈತರಿಂದ ಬರುವಂತಹ ಕೊಬ್ಬರಿಯನ್ನು ತೆಗೆದುಕೊಳ್ಳುವಾಗ ಇಲ್ಲದ ಕಾರಣಗಳನ್ನು ಹೇಳಿ ಹೆದರಿಸಿ ಬೇಲಿಕ್ಕೆ ಇಂತಿಷ್ಟು ಹಣವನ್ನು ಸ್ಥಳೀಯ ಗ್ರೇಡಿಂಗ್ ಅಧಿಕಾರಿ ಪಡೆಯುತ್ತಾರೆ ಎಂಬ ಆರೋಪ ರೈತರಿಂದಲೇ ಕೇಳಬರುತ್ತಿದೆ. ಜೊತೆಗೆ ಸ್ಥಳೀಯ ಖಾಸಗಿ ಏಜಾನ್ಸಿದಾರರು ಕೆಲ ರೈತರ ಹೆಸರಿನಲ್ಲಿ ಕಳುಹಿಸುವ ಕೊಬ್ಬರಿಯನ್ನು ಯಾರೂ ಇಲ್ಲದ ವೇಳೆಯಲ್ಲಿ ನಫೆಡ್ ಖರೀದಿ ನಿಯಮಗಳನ್ನು ಗಾಳಿಗೆ ತೂರಿ ಬೇಲಿಯಿಂದ ಬೇಲಿಕ್ಕೆ ಯಥಾವತ್ತಾಗಿ ಆರಿಸದೇ ತುಂಬಿಕೊಳ್ಳುತ್ತಿದ್ದಾರೆ. ಸಂಜೆ ವೇಳೆಯಲ್ಲಿ ಹೀಲಾಗಿಲಿನಿಂದಲೂ ಕೊಬ್ಬರಿಯನ್ನು ತೆಗೆದುಕೊಳ್ಳುತ್ತಿರುವ ವಿಡಿಯೋ ಸಾಕ್ಷ್ಯ ಸಮೇತವಾಗಿ ದೊರತಿದೆ. ಸ್ಥಳೀಯ ಅಧಿಕಾರಿಗಳು ಸರ್ಕಾರಕ್ಕೆ ವಂಚಿಸುತ್ತಿದ್ದು ಸಂಬಂಧಪಟ್ಟ ಮೇಲಾಧಿಕಾರಿಗಳು ಕೂಡಲೇ ಕ್ರಮಕ್ಕೆ ಮುಂದಾಗಬೇಕು ಎಂಬುದು ಸ್ಥಳೀಯ ರೈತರ ಒತ್ತಾಯವಾಗಿದೆ.

ಪ್ರಾಥಮಿಕ ಶಾಲೆಗೆ ಜಿಪಂ ಸಿಇಒ ಭೇಟಿ

ಶಿಗ್ಗಾಂವಿ: ತಾಲೂಕಿನ ಸುಣಗೂರು ಗ್ರಾಮದಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯನ್ನು ಮಾದರಿ ಶಾಲೆ ಯೋಜನೆಯಡಿ ಅಭಿವೃದ್ಧಿಪಡಿಸುತ್ತಿದ್ದು, ಜಿಲ್ಲಾ ಪಂಚಾಯತಿ ಸಿಇಒ ಶ್ರೀಮತಿ ಶರನ್ಮಜುಮ್ ಅವರು ಭೇಟಿ ನೀಡಿ ಪರಿಶೀಲಿಸಿ, ಶಾಲೆಯಲ್ಲಿನ ಶೈಕ್ಷಣಿಕ ಚಟುವಟಿಕೆಗಳು, ಅಭಿವೃದ್ಧಿ ಕಾಮಗಾರಿಗಳ ಪ್ರಗತಿಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಶಾಲೆಯಲ್ಲಿ ಕಳೆದ ಸುಮಾರು 15 ವರ್ಷಗಳಿಂದ ಬಾಡಿಹಾತಿ, ಹಾಜರಾತಿಯನ್ನು ಕಾಯ್ದು ಕೊಳ್ಳಲಾಗುತ್ತಿದೆ. ರಾಷ್ಟ್ರೀಯ ಪ್ರತಿಭಾನ್ವೇಷಣಾ ಪರೀಕ್ಷೆ, ಎಸ್.ಎಂ.ಎಸ್ ಪರೀಕ್ಷೆ, ಡ್ರಾಯಿಂಗ್ ಗ್ರೇಡ್ ಲೋಯರ್ ಮತ್ತು ಹೈಯರ್ ಪರೀಕ್ಷೆಗೆ ನೊಂದಾಯಿಸಿ ಉತ್ತಮ ಫಲಿತಾಂಶ ಪಡೆಯಲಾಗುತ್ತಿರುವುದು ಸರ್ಕಾರಿ ಶಾಲೆಗಳಲ್ಲಿನ ಶೈಕ್ಷಣಿಕ ಗುಣಮಟ್ಟವನ್ನು ಪ್ರತಿನಿಧಿಸುವಂತಿದೆ ಎಂದರು.

ವಿವಿಧ ವಿಜ್ಞಾನ ರಾಷ್ಟ್ರಮಟ್ಟದ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಗಣನೀಯ ಸಾಧನೆ ಮಾಡಿದ್ದು, ಕಳೆದ ಸಪೆಂಬರ್‌ನಲ್ಲಿ ಮಧ್ಯಪ್ರದೇಶದಲ್ಲಿ ನಡೆದ ಅಂತರಾಷ್ಟ್ರೀಯ ಮಕ್ಕಳ ತಿಪಾದರದಲ್ಲಿ ನಾಲ್ಕು ಮಂದಿ ವಿದ್ಯಾರ್ಥಿಗಳು ಪಾಲ್ಗೊಂಡು ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ಶಾಲೆಯಲ್ಲಿ ಉತ್ತಮ ಕಲಿಕಾವಾತಾವರಣವನ್ನು ಸೃಷ್ಟಿಸುವಲ್ಲಿ ಶಿಕ್ಷಕರ ಪಾತ್ರ ಪ್ರಿಯವಾಗಿದೆ ಎಂದರು. ನರೇಗಾ ಯೋಜನೆಯಡಿ ಶಾಲೆಯ ಆವರಣದಲ್ಲಿ ಮಿನಿ ಉದ್ಯಾನವನ ನಿರ್ಮಿಸುತ್ತಿದ್ದು ವಿವಿಧೋದ್ದೇಶಕ್ಕಾಗಿ ಬಳಸುವಂತಿದೆ. ಪ್ರಾರ್ಥನೆ, ರಾಷ್ಟ್ರೀಯ ಹಬ್ಬಗಳ ಆಚರಣೆ, ಪರಿಸರದೊಂದಿಗೆ ಚಟುವಟಿಕೆಗಳ ಮೂಲಕ ಕಲಿಸಲು ಪ್ರಾರಂಭಿಸಲಾಗಿದ್ದು, ಮಕ್ಕಳ ಪ್ರೇರಿಯಾವಹಾಗಿ ಅಭಿವೃದ್ಧಿಪಡಿಸಲಾಗುವುದು. ಶಾಲೆಯಲ್ಲಿ ವಾಟರ್‌ಲೆಸ್ ಶೌಚಾಲಯವಿದ್ದು ಮತ್ತಷ್ಟು ಆಕರ್ಷಣೆಯಗೊಳಿಸಬೇಕು. ಎತ್ತರದ ಕಾಂಪೌಂಡ್ ನಿರ್ಮಾಣ, ಸಸಿನೆಡುವುದು, ಅಡುಗೆ ಕೋಣೆ ನಿರ್ಮಾಣ, ಶೌಚಾಲಯ ನಿರ್ಮಾಣ ಕಾಮಗಾರಿಗಳು ಶೀಘ್ರವಾಗಿ ಮುಗಿಸಬೇಕು. ಮಳೆನೀರುಕೊಯ್ಲು, ಸೌರಮಗುರಿಂಡಿಕಾಮಗಾರಿಗಳು ಪೂರ್ಣಗೊಂಡಿದ್ದು, ಶಾಲೆಯಮಕ್ಕಳ ಉಪಯೋಗಕ್ಕಾಗಿ ಸೈಕಲ್‌ಸ್ಟ್ಯಾಂಡ್ ನಿರ್ಮಿಸಿ ಕೊಡುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಶಿಕ್ಷಕ ಎಚ್.ಎಸ್.ರುದ್ರೇಶಕುಮಾರ್ ಮಾತನಾಡಿ, ಶಾಲೆಯ ಎಲ್ಲಾ ಶಿಕ್ಷಕರಿಗೂ ನವದೆಹಲಿಯ ಭಾರತ ಸರ್ಕಾರದ ಮಿನಿಸ್ಟ್ರಿ ಆಫ್ ವಾಟರ್ ಆಂಡ್ ಸ್ಯಾನಿಟೇಶನ್, ಮಿನಿಸ್ಟ್ರಿ ಆಫ್ ಯುಎಸ್ ಆಫೇರ್ಸ್ ಆಂಡ್ ಸ್ಪೋರ್ಟ್ಸ್, ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್ ವತಿಯಿಂದ 2018-19ರಲ್ಲಿ ಸ್ವಚ್ಛಭಾರತ್ ಸಮ್ಮರ್ ಇಂಟರ್ನ್ ಶಿಪ್‌ನಲ್ಲಿ ಭಾಗವಹಿಸುವಂತೆ ಅವಕಾಶ ಕಲ್ಪಿಸಿ ಸರ್ಟಿಫಿಕೇಟ್ ನೀಡಲಾಗಿದೆ ಎಂದರು.

ತಾ.ಪಂ.ಇಒ ಕೆ.ಬಿ.ಶಿವಕುಮಾರ್, ಜಿ. ವೆಂಕಟಾಪುರ ಗ್ರಾಪಂ ಅಭಿವೃದ್ಧಿ ಅಧಿಕಾರಿ ಪ್ರಕಾಶ್ ಕುಮಾರ್, ಗುತ್ತಿಗೆದಾರರಾದ ಎಸ್.ಎ. ನಾಗೇಶ್‌ಗೌಡ, ಎಸ್.ಡಿ.ದೇವರಾಜು, ಬಚ್ಚೇಗೌಡ, ಉಮಾದೇವಿ, ಎ.ಡಿ. ನಾಗರಾಜ, ಬಿ. ನಾಗರಾಜು. ಗ್ರಾಮಸ್ಥರು, ಹಾಜರಿದ್ದರು.

ಕಿಸಾನ್ ಸಮ್ಮಾನ್ ಯೋಜನೆ ಸಿರಿಧಾನ್ಯಗಳಿಗೂ ಅನ್ವಯವಾಗಲಿ

ಮೈಸೂರು: ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಯನ್ನು ಹೆಚ್ಚಿನ ಪ್ರೋತ್ಸಾಹದೊಂದಿಗೆ ಸಿರಿಧಾನ್ಯಗಳಿಗೂ ಅನ್ವಯಿಸಬೇಕು ಎಂದು ಎಚ್.ಡಿ.ಕೋಟೆಯ ಭಾರತೀಯ ಸಿರಿಧಾನ್ಯ ಸೋದರಿಯರ ಬಳಗ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಸಂಚಾಲಕಿ ಗೌರಮ್ಮ, ಕುಟುಂಬಕ್ಕೆ ಆಧಾರವಾದ ಆಹಾರ, ಆರೋಗ್ಯ, ಪೌಷ್ಟಿಕತೆ ಮತ್ತು ಮೇಪನ ಭದ್ರತೆಯನ್ನು ಸಿರಿಧಾನ್ಯಗಳು ಒದಗಿಸುವುದರಿಂದ, ಸಿರಿಧಾನ್ಯಕ್ಕೂ ಮಹಿಳೆಯ ಕಾಳಜಿಗೂ ಅವಿನಾಭಾವ ಸಂಬಂಧವಿದೆ. ದಿನೇ ದಿನೇ ಹೆಚ್ಚುತ್ತಿರುವ ಹವಾಮಾನ ವೈಪರೀತ್ಯದಿಂದ ಸದ್ಯ ಬೆಳೆಯುತ್ತಿರುವ ಭತ್ತ, ಗೋಧಿಯಂತಹ ಏಕಬೆಳೆ ವ್ಯವಸಾಯ ಪದ್ಧತಿ ಮುಂದಿನ ದಿನಗಳಲ್ಲಿ ಕಣ್ಮರೆಯಾಗಲಿದೆ. ಇದರ ಒಟ್ಟು ಪರಿಣಾಮ ಮಹಿಳೆಯರ ಮೇಲೆಯೇ ಆಗುವ ಆತಂಕವಿದೆ. ಆದ್ದರಿಂದ ಮಹಿಳೆಯರಕ್ಷಣೆಗಾಗಿ ಎಲ್ಲರೀತಿಯ ವಾತಾವರಣಕ್ಕೂ, ಕಾಳಿಗೆ ಗುಣ ಹೊಂದಿರುವ ಸಿರಿಧಾನ್ಯಗಳ ಉತ್ತೇಜನವೇ ಭವಿಷ್ಯದ ಸಮಸ್ಯೆಗಳಿಗೆ ಉತ್ತರವಾಗಿದ್ದು ಆಹಾರ ಭದ್ರತೆಯ ಪ್ರಮುಖ ಮಾರ್ಗವಾಗಿದೆ ಎಂದರು.

ಕೇಂದ್ರ ಸರ್ಕಾರ ಕಿಸಾನ್ ಸಮ್ಮಾನ್ ಯೋಜನೆಯನ್ನು ಹೆಚ್ಚಿನ ಪ್ರೋತ್ಸಾಹದೊಂದಿಗೆ ಸಿರಿಧಾನ್ಯಗಳಿಗೂ ಅನ್ವಯಿಸಬೇಕು. ಎಲ್ಲ ರೈತರಿಗೂ ನೀಡಲಾಗುತ್ತಿರುವ 6000ರೂ. ಪ್ರೋತ್ಸಾಹ ಧನದಂತೆಯೇ ಸಿರಿಧಾನ್ಯಗಳನ್ನು ಬೆಳೆದು ಪ್ರಾಕೃತಿಕ ವೈವಿಧ್ಯತೆ ಕಾಪಾಡುತ್ತಿರುವ ರೈತರಿಗೆ ಕನಿಷ್ಠ 10,000 ರೂ. ನೀಡಬೇಕು. ಪೌಷ್ಟಿಕ ಭದ್ರತೆ, ಆಹಾರ ಭದ್ರತೆ, ವಾತಾವರಣ ಭದ್ರತೆಯೊಂದಿಗೆ ವಾತಾವರಣ ಏರುಪೇರಿಗೆ ಪರಿಹಾರವಾಗುತ್ತಿರುವ ಸಿರಿಧಾನ್ಯ ಬೆಳೆಗಾರರನ್ನು ಪ್ರೋತ್ಸಾಹಿಸುವ ಅಗತ್ಯ ಹಿಂದೆಂದಿಗಿಂತಲೂ ಪ್ರಮುಖವಾಗಿದೆ ಎಂದು ಪ್ರತಿಪಾದಿಸಿದರು.

ಜಾಗತಿಕ ಆರೋಗ್ಯ ದೇಶಗಳ ಪಟ್ಟಿಯಲ್ಲಿ 180ನೇ ಸ್ಥಾನದಲ್ಲಿರುವ ಭಾರತ ಪೌಷ್ಟಿಕತೆಯ ಆಗರವಾದ ಮತ್ತು ಎಲ್ಲರಿಗೂ ದಕ್ಕುವ ಸಿರಿಧಾನ್ಯಗಳನ್ನು ಉತ್ತೇಜಿಸುವುದು ಇಂದಿನ ತುರ್ತಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಬಳಗದ ಮುಖಂಡರು ಇದ್ದರು.

ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ಕೆ ಶಾಸಕರಿಂದ ಚಾಲನೆ

ತುರುವೇಕೆರೆ: ತಾಲೂಕಿನ ಮಾಯಸಂದ್ರ ಹೋಬಳಿಯ ಯರದೇಹಳ್ಳಿ ಸಮೀಪದ ದಿ.26 ಹೇಮಾವತಿ ಉಪನಾಲೆಯಲ್ಲಿ ಪೂಜೆ ಸಲ್ಲಿಸುವ ಮೂಲಕ ಈ ಭಾಗದ ಕೆರೆಗಳಿಗೆ ನೀರು ತುಂಬಿಸುವ ಕಾರ್ಯಕ್ಕೆ ಶಾಸಕ ಮಸಾಲಜಯರಾಂ ಸೋಮವಾರ ಚಾಲನೆ ನೀಡಿದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಕಳೆದ 20 ವರ್ಷಗಳಿಂದ ಯಾವೊಬ್ಬ ಜನಪ್ರತಿನಿಧಿಯೂ ಈ ಭಾಗದ ಕೆರೆಗಳಿಗೆ ಹೇಮಾವತಿ ನಾಲೆ ನೀರು ಹರಿಸದೆ ಬರಪೀಡಿತ ಪ್ರದೇಶವಾಗಿತ್ತು. ಕೃಷಿ ಭೂಮಿ ಬಂಜರಾಗಿತ್ತು. ರೈತರು ಯಾವುದೇ ಬೆಳೆ ಬೆಳೆದೂ ಉತ್ತಮ ಫಲವು ಸಿಗುತ್ತಿರಲಿಲ್ಲ, ಜೊತೆಗೆ ಸಾವಿರಾರು ಅಡಿಗಳ ಕೊಳವೆ ಬಾವಿ ಕೊರೆಯಿಸಿದರು ಒಂದು ಹನಿ ನೀರು ಬರುತ್ತಿರಲಿಲ್ಲ, ಇದನ್ನುರಿತು ಮಾಯಸಂದ್ರ ಹೋಬಳಿಯ ರೈತರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಮಾಧುಸ್ವಾಮಿ ಬಳಿ ನಿಯೋಗ ಹೋಗಿ ಈ ಭಾಗದ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಡಲಾಗಿತು.

ಇದರಂತೆ ಮಾಯಸಂದ್ರ ಹೋಬಳಿ ಭಾಗದ ಉಪನಾಲೆಗಳಿಗೆ ಕಾಲುಬಾಗಿಗಳನ್ನು ತೆರವುಗೊಳಿಸಲು 40 ಲಕ್ಷ ರೂಪಾಯಿಗಳ ಅನುದಾನ ಬಿಡುಗಡೆ ಮಾಡಲಾಗಿತು. ಸಿಎಸ್ ಪುರ ಮತ್ತು ಮಾಯಸಂದ್ರ ಹೋಬಳಿ ಹಾಗು ಕ್ಷೇತ್ರದ ವಿವಿಧ ಭಾಗದ ಕೆರೆಗಳಿಗೆ ನೀರು ಬಿಡುವ ಕೆಲಸವನ್ನು ಬೆಜೆಪಿ ಸರ್ಕಾರ ಹೊರತು ಪಡಿಸಿ ಮತ್ತಾವ ಸರ್ಕಾರಗಳು ಮಾಡಲಿಲ್ಲ, ಆಗಾಗಿ ಹಂತ ಹಂತವಾಗಿ ತಾಲೂಕಿನ ಎಲ್ಲ ಕೆರೆ ಕುಟ್ಟೆಗಳನ್ನು ತುಂಬಿಸುವೆ. ಡಿಸೆಂಬರ್ ಅಂತ್ಯದವರೆಗೂ ಹೇಮಾವತಿ ನಾಲಾ ನೀರು ಹರಿಯುವುದರಿಂದ ಯಾವ ರೈತರೂ ಗೊಂದಲಕ್ಕೆ ಒಳಗಾಗದಿರೆಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಜಿಪಂ ಸದ್ಯ ಜಯಲಕ್ಷ್ಮಿಜಯರಾಂ, ಮಾಜಿ ಸದ್ಯ ಶ್ರೀನಿವಾಸ್, ತಾಪಂ ಸದ್ಯ ಮಹಲಿಂಗಯ್ಯ, ಮುಖಂಡರು ಮತ್ತು ಗ್ರಾಮಸ್ಥರು ಪಾಲ್ಗೊಂಡಿದ್ದರು.

ರೈತರಲ್ಲಿ ತಪ್ಪು ಗ್ರಹಿಕೆ ಬೇಡ

ಮಾಯಸಂದ್ರ ಹೋಬಳಿಯ ಗುಡ್ಡೇನಹಳ್ಳಿ ರೈತರ ತೆಂಗಿನ ಸಸಿಗಳನ್ನು ಶಾಸಕ ಮಸಾಲ ಜಯರಾಂ ಕೀಳಿಸಿದ್ದಾರೆಂಬ ಮಾಜಿ ಶಾಸಕ ಎಂ.ಟಿ.ಕೃಷ್ಣಪ್ಪ ಆರೋಪಿಸಿ ಹಾದಿಯಾತ್ರೆ ಮಾಡು ಬಗ್ಗೆ ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಈ ವಿಚಾರದಲ್ಲಿ ಸತ್ಯ ಹತ್ತಿರವೇನಿಲ್ಲ, ಈ ಬಗ್ಗೆ ರೈತರಲ್ಲಿ ತಪ್ಪು ಗ್ರಹಿಕೆ ಬೇಡ. ನಾಳೆಯೇ ಗುಡ್ಡೇನಹಳ್ಳಿ ಗ್ರಾಮದಲ್ಲಿ ತಹಸೀಲ್ದಾರ್ ಹಾಗು ಉಪ ವಿಭಾಗಾಧಿಕಾರಿ ಸಮ್ಮುಖದಲ್ಲಿ ರೈತ ಸಂಘದ ಸಭೆ ಕಾನೂನಾತ್ಮಕವಾಗಿ ರೈತರಿಗೆ ನ್ಯಾಯ ಒದಗಿಸಿಕೊಡುವೆ. ಈ ವಿಚಾರದಲ್ಲಿ ರೈತರು ಬೇಲೆಯವರ ಮಾತಿಗೆ ತಿರುಗಬೇಡಿ ಆದರೆ ಬಜಪ್ಪಾರರು ಎಂದು ಸ್ಪಷ್ಟಪಡಿಸಿದರು.

ಗಣೇಶೋತ್ಸವ ಸಾಮರಸ್ಯದ ಸಂಕೇತ

ಗೌರಿಬಿದನೂರು: ಸಾರ್ವಜನಿಕವಾಗಿ ಆಚರಿಸುವ ಗಣೇಶೋತ್ಸವ ಸಮಾಜದಲ್ಲಿ ವಿವಿಧ ಸಮುದಾಯಗಳ ನಡುವೆ ಸಾಮರಸ್ಯ ಕಾಪಾಡುವ ಸಂಕೇತವಾಗಿದೆ ಎಂದು ಭಾರತ ಮಾತಾ ಸೇವಾ ಟ್ರಸ್ಟ್ ಅಧ್ಯಕ್ಷ ಎನ್.ಎಂ.ರವಿನಾರಾಯಣರೆಡ್ಡಿ ಅಭಿಪ್ರಾಯಪಟ್ಟರು.

ನಗರದ ಮರಿಗಮ್ಮೆದೇವಾಲಯದಲ್ಲಿ ನಡೆದ ಸ್ಪರ್ಧೆಗಳಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಿ ಮಾತನಾಡಿದರು.

ಗಣೇಶ ಹಿಂದೂ ಸಂಸ್ಕೃತಿಯಲ್ಲಿ ಮೇರು ಸ್ಥಾನ ಹೊಂದಿದ್ದಾರೆ. ಗಣೇಶ ವಿದ್ಯಾದೇವತೆ ಹಾಗೂ ವಿಘ್ನಗಳ ನಿವಾರಕನಾಗಿರು ಪೂಜಿಸುವುದಿಂದ ಎಲ್ಲ ಶುಭ ಕಾರ್ಯಗಳಿಗೆ ಮೊದಲಿಗೆ ಗಣೇಶನನ್ನು ಪೂಜಿಸಲಾಗುವುದು ಎಂದರು. ನಗರಸಭೆ ಮಾಜಿ ಸದ್ಯ ಕೆ.ಎನ್.ಅನಂತರಾಜ್ ಮಾತನಾಡಿ, ಗಣೇಶೋತ್ಸವದ ಸಂದರ್ಭದಲ್ಲಿ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವ ಮೂಲಕ ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವುದು ಪ್ರಶಂಸನೀಯ ಎಂದರು. ಡಾ.ವಿಜಯ್ ಕುಮಾರ್ ಕೋಚಿಮುಲ್ ಮಾಜಿ ನಿರ್ದೇಶಕ ಎನ್.ರಮೇಶ್, ವಿಶಾಯಕ ಮಿತ್ರ ಮಂಡಳಿಯ ರಾಂಬಾಬು,ಬೆಂಕೇಟೇಶ್ ಸೇರಿದಂತೆ ಇನ್ನಿತರರು ಹಾಜರಿದ್ದರು.

ಶನೀಡರ್ ಎಲೆಕ್ಟ್ರಿಕ್ ಪ್ರಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್
Schneider Electric
CIN: U32109KA1984PLC079103
ರಿಜಿಸ್ಟರ್ಡ್ ಕಚೇರಿ : 5ಸಿ/ಎ ಕೆಎಎಡಿಸಿ ಇಂಡಸ್ಟ್ರಿಯಲ್ ಏರಿಯಾ, ಅತ್ತಿಬೆಲೆ, ಬೆಂಗಳೂರು- 562107, ಕರ್ನಾಟಕ, ಫೋನ್-080 67888300
ವೆಬ್‌ಸೈಟ್: www.schneiderelectricpresident.com
ಇ-ಮೇಲ್: urvashi.bhatia@se.com

36ನೇ ವಾರ್ಷಿಕ ಸರ್ವಸದಸ್ಯರ ಸಭೆಯ (ಎಜಿಎಂ), ರಿಮೋಟ್ ಇ-ವೋಟಿಂಗ್ ಮತ್ತು ಪುಸ್ತಕ ಮುಚ್ಚುವಳಿಗೆ ಸಂಬಂಧಿಸಿದ ಮಾಹಿತಿಯ ನೋಟಿಸ್

ಇದು ಕಂಪನಿಯು 2020ರ ಆಗಸ್ಟ್ 24ರಂದು ನೀಡಿದ ಮಾಹಿತಿಯ ಮುಂದುವರಿಕೆಯಾಗಿದ್ದು, ಶನೀಡರ್ ಎಲೆಕ್ಟ್ರಿಕ್ ಪ್ರಸಿಡೆಂಟ್ ಸಿಸ್ಟಮ್ಸ್ ಲಿಮಿಟೆಡ್ (ಕಂಪನಿ)ಯ ಸದಸ್ಯರಿಗೆ ಮಾಹಿತಿ ನೀಡುವುದೇನೆಂದರೆ ಕಂಪನಿಯ ಮೂವತ್ತಾರನೇ ವರ್ಷೀಕ ಸರ್ವ ಸದಸ್ಯರ ಸಭೆ (ಎಜಿಎಂ) 2020ರ ಸೆಪ್ಟೆಂಬರ್ 18ರಂದು ಶುಕ್ರವಾರ ಮಧ್ಯಾಹ್ನ 3.30ಕ್ಕೆ ಕಂಪನಿಗಳ ಕಾಯ್ದೆ-2013ರ ಅನ್ವಯವಾಗುವ ನಿಬಂಧನೆಗಳ ಅನುಸಾರ ಮತ್ತು ಎಂಸಿಎ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, ದಿನಾಂಕ 08ನೇ ಏಪ್ರಿಲ್ 2020, ಎಂಸಿಎ ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020, ದಿನಾಂಕ 13ನೇ ಏಪ್ರಿಲ್ 2020 ಮತ್ತು ಎಂಸಿಎ ಸಾಮಾನ್ಯ ಸುತ್ತೋಲೆ ಸಂಖ್ಯೆ 20/2020 ದಿನಾಂಕ 5ನೇ ಮೇ 2020